# ಬೆಳಗಾವಿಯಲ್ಲಿ ವಿವಿವ: 200 ಕೋಟಿ ಬಂಡವಾಳ

ಬೆಂಗಳೂರು: ವೈಮಾನಿಕ ಕ್ಷೇತ್ರದ ಅಭಿವೃದ್ಧಿಗಾಗಿ ಕ್ವೆಸ್ಟ್ ಗ್ಲೋಬಲ್ ಹಾಗೂ ಟೆಕ್ಸ್‌ಟ್ರಾನ್ ಸಿಸ್ಟಮ್ಸ್ ಎಂಬ ಸಂಸ್ಥೆಗಳು ಬೆಳಗಾವಿಯಲ್ಲಿ ವಿಶೇಷ ವಿತ್ತ ವಲಯ(ವಿವಿವ) ರಚಿಸಲು ಮುಂದಾಗಿದೆ.

ಜಂಟಿ ಸಹಭಾಗಿತ್ವದಡಿ ಕ್ವೆಸ್ಟ್ ಗ್ಲೋಬಲ್ ಹಾಗೂ ಟೆಕ್ಸ್‌ಟ್ರಾನ್ ಸಂಸ್ಥೆಗಳು ಈಗಾಗಲೇ ಜಾಗತಿಕ ಮಟ್ಟದಲ್ಲಿ ವಾಯುಯಾನ ಹಾಗೂ ರಕ್ಷಣಾ ವಿಭಾಗಕ್ಕೆ ಸಂಬಂಧಿಸಿ ನಾನಾ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿವೆ. ಈಗ ಬೆಳಗಾವಿ ಬಳಿ 300 ಎಕರೆ ಪ್ರದೇಶದಲ್ಲಿ ವಿವಿವ ಆರಂಭಿಸಲು ರೂಪು, ರೇಷೆ ಸಿದ್ಧ ಪಡಿಸುತ್ತಿವೆ.

ಕ್ವೆಸ್ಟ್ ಗ್ಲೋಬಲ್ ಅಧ್ಯಕ್ಷ ಅರವಿಂದ್ ಮೆಲ್ಲಿಗೇರಿ, 'ಏರೊ ಇಂಡಿಯಾ'ದಲ್ಲಿ ಗುರುವಾರ ಈ ವಿಷಯ ತಿಳಿಸಿದರು. ಬೆಳಗಾವಿಯಲ್ಲಿ ವಿಮಾನ ನಿಲ್ದಾಣದ ಸೌಲಭ್ಯವಿದೆ. ಈ ನಗರ ಇತ್ತೀಚೆಗೆ ಪ್ರಗತಿ ಕಾಣುತ್ತಿದ್ದು, ಮುಂಬಯಿ, ಗೋವಾಗೆ ಸನಿಹದಲ್ಲಿದೆ. ಬೆಂಗಳೂರಿನ ಸಂಪರ್ಕವನ್ನೂ ಸುಲಭವಾಗಿ ಮಾಡಿಕೊಳ್ಳಬಹುದು. ಹೀಗಾಗಿ ಈ ವಿವಿವಕ್ಕೆ ಬೆಳಗಾವಿ ಆಯ್ಕೆ ಮಾಡಲಾಗಿದೆ ಎಂದು ಹೇಳಿದರು.

ಒಟ್ಟು 4 ಹಂತಗಳಲ್ಲಿ ಈ ಯೋಜನೆ ಕಾರ್ಯಗತಗೊಳಿಸಲು ನಿರ್ಧರಿಸಲಾಗಿದೆ. ಮೊದಲ ಹಂತದಲ್ಲಿ ಪ್ರದೇಶದ ಅಭಿವೃದ್ಧಿಗಾಗಿ 65 ಕೋಟಿ ರೂ. ಖರ್ಚು ಮಾಡಲಾಗುವುದು. ಒಟ್ಟಾರೆ 200 ಕೋಟಿ ರೂ. ತೊಡಗಿಸಲಾಗುವುದು. ಇದರಿಂದ ದೊಡ್ಡ ಮಟ್ಟದ ಉದ್ಯೋಗಾವಕಾಶ ಸೃಷ್ಟಿಯಾಗಲಿದೆ ಎಂದರು.

ಭಾರತೀಯ ಹಾಗೂ ವಿದೇಶಿ ಕಂಪನಿಗಳು ವಿಮಾನಯಾನ, ರಕ್ಷಣಾ ವಲಯಕ್ಕೆ ಸಂಬಂಧಿಸಿದ ಮಳಿಗೆಗಳನ್ನು ಇಲ್ಲಿ ತೆರೆಯಲಿವೆ. ಜತೆಗೆ ಕೈಗಾರಿಕಾ ಸಂಸ್ಥೆಗಳೂ ನೆಲೆ ಕಂಡುಕೊಳ್ಳಲಿವೆ. ಮುಖ್ಯವಾಗಿ ಭಾರತೀಯ ಸೇನೆಗೆ ಬೇಗಾದ ಯುದ್ಧಸಲಕರಣೆ ತಯಾರಿಸಿ ಕೊಡಲು ಅಗತ್ಯ ಸಹಕಾರ ನೀಡಲಾಗುತ್ತದೆ. ಅತ್ಯಾಧುನಿಕ ಯುದ್ಧೋಪಕರಣ ಉತ್ಪಾದಿಸುವ ಕಾರ್ಯ ನಡೆಯಲಿದೆ. ಈ ವಿವಿವಕ್ಕೆ ಬೇಕಾದ ಮೂಲಸೌಕರ್ಯವನ್ನು ಸಂಸ್ಥೆಗಳು ಒದಗಿಸಲಿವೆ.

## 2ನೇ ದಿನದ ಮುಖ್ಯಾಂಶ...

- ಬುಧವಾರಕ್ಕಿಂತ ಗುರುವಾರ ಹೆಚ್ಚು ಮಂದಿ ಯಲಹಂಕ ವಾಯುನೆಲೆಗೆ ಆಗಮನ
- ವ್ಯಾಪಾರ- ವಹಿವಾಟಿಗೆ ಮೀಸಲಾದ ಮಳಿಗೆಗಳಲ್ಲೂ ಹೆಚ್ಚಿನ ಜನಸಂದಣಿ
- ಯುದ್ಧ ವಿಮಾನ/ಹೆಲಿಕಾಪ್ಟರ್‌ಗಳ ರೋಮಾಂಚಕ ಪ್ರದರ್ಶನ
- ಮಾಜಿ ಕ್ರಿಕೆಟಿಗರಾದ ಜಾವಗಲ್ ಶ್ರೀನಾಥ್,ಸಯ್ಯದ್ ಕೀರ್ಮಾನಿ ಭೇಟಿ
- ಉದ್ಯಮಿ ರತನ್ ಟಾಟಾ ಧ್ರುವ ಹೆಲಿಕಾಪ್ಟರ್‌ನಲ್ಲಿ ಹಾಗೂ ಒಲಿಂಪಿಕ್ ಚಿನ್ನ ವಿಜೇತ ಅಭಿನವ್ ಬಿಂದ್ರಾ ಎಫ್ 16ನಲ್ಲಿ ಹಾರಾಟ
- 8ಕ್ಕಿಂತ ಹೆಚ್ಚು ಪತ್ರಿಕಾಗೋಷ್ಠಿ 20ಕ್ಕೂ ಹೆಚ್ಚು ಬಿಸಿನೆಸ್ ಸಭೆ
- ವಿಮಾನ ನಿಲ್ದಾಣದಲ್ಲಿ ಸರಕು ಸಾಗಣೆಯಲ್ಲಿ ನೆರವಾಗುವ ಬಿಎ 28 ಟೋಯಿಂಗ್ ಟ್ರ್ಯಾಕ್ಟರ್ ಬಿಇಎಂಎಲ್‌ನಿಂದ ಲೋಕಾರ್ಪಣೆ
- ದಕ್ಷಿಣ ಭಾರತದ ಮೇಲೆ ವೈಮಾನಿಕ ದಾಳಿ ನಡೆಯದಂತೆ ನೋಡಿಕೊಳ್ಳಲು, ಭಾರತೀಯ ವಾಯುಸೇನೆ ಇನ್ನಷ್ಟು ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲಿದೆ -ಫಾಲಿ ಎಂ.ಮೇಜರ್,ವಾಯುಸೇನೆಯ ಮುಖ್ಯಸ್ಥ
- ವೈಮಾನಿಕ ಮತ್ತು ರಕ್ಷಣಾ ಕೇಂದ್ರ ಅಭಿವೃದ್ಧಿಗೆ ಬೆಳಗಾವಿಯಲ್ಲಿ ವಿಶೇಷ ವಿತ್ತ ವಲಯ ಸ್ಥಾಪನೆ- ಅರವಿಂದ ಮಲ್ಲಿಗೇರಿ, ಕ್ವೆಸ್ಟ್ ಗ್ಲೋಬಲ್
- ರಕ್ಷಣಾ ಇಲಾಖೆಯನ್ನು ಬಲಗೊಳಿಸಲು ಅಗತ್ಯವಾದ ಅಭಿವೃದ್ಧಿ ಮತ್ತು ಸಂಶೋಧನೆಗಳ ಕಾರ್ಯದಲ್ಲಿ ಎಚ್‌ಎಎಲ್ ಪಾಲ್ಗೊಳ್ಳಲಿದೆ- ಅಶೋಕ್ ಬವೇಜಾ,ಎಚ್‌ಎಎಲ್ ಅಧ್ಯಕ್ಷ